ಕರಗಲಿ ಧಗೆ ಹಬ್ಬಲಿ ನಗೆ

# ಮಗುವಿಗೇನು ಹೆಸರು?



**ಹುಟ್ಟಿದ ಕೂಸಿಗೆ 'ರಿ' ಅಕ್ಷರದಲ್ಲೇ ಹೆಸರಿಡಬೇಕೆಂದು ಭಟ್ಟರು ಸೂಚಿಸಿದ್ದರು. ರಿಶಿತ, ರೀಮಾ, ರೀತಾ ಅಂತೆಲ್ಲಾ ಹೆಸರುಗಳು ಸಿಕ್ಕರೂ ಅವುಗಳೆಲ್ಲ ಹಳೆಯದಾದವು ಎಂದು ಗೆಳತಿ ಪರಿತಪಿಸುತ್ತಿರುವಾಗ, 'ಸುಮ್ಮನೆ ರಿನ್ ಅಂತ ಹೆಸರಿಟ್ಟುಬಿಡು, ಇಲ್ಲಿಯವರೆಗೆ ಯಾರೂ ಇಟ್ಟಿಲ್ಲ, ಮುಂದೆಯೂ ಯಾರೂ ಇಡಲ್ಲ' ಅಂತ ಅವರಮ್ಮ ಕಿಚಾಯಿಸಬೇಕೆ?**

**ಸಮತಾ ಆರ್.**
ಕಲೆ: ಸಂತೋಷ್ ಸಸಿಹಿತ್ಲು

ಕಳೆದ ಜೂನ್‌ನಲ್ಲಿ ಒಂದು ದಿನ ಶಾಲೆಯಲ್ಲಿ ಮೊದಲ ಪಿರಿಯಡ್‌ಗೆ ಹೋದವಳು ರೂಢಿಯಂತೆ ಮೊದಲು ಹಾಜರಾತಿ ಕರೆಯಲು ಶುರುಮಾಡಿದೆ. ಕೊನೆಯಲ್ಲಿ ಒಂದು ಹೊಸ ಹೆಸರು ಕಾಣಿಸಿತು. ಯಾವುದೋ ಹೊಸ ದಾಖಲಾತಿ ಇರಬೇಕೆಂದುಕೊಂಡು ಕುತೂಹಲದಿಂದ ನೋಡಿದೆ. 'ಬಾಲ್ ಕೇಶ್' ಅಂತ ಇತ್ತು. 'ಇದೇನಪ್ಪ ಹೊಸ ಹೆಸ್ರು! ಹುಡುಗನೊ ಹುಡುಗಿಯೋ ನೋಡುವ' ಎಂದು 'ಬಾಲ್ ಕೇಶ್' ಎಂದು ಕರೆದಾಗ, 'ಪ್ರೆಸೆಂಟ್ ಮೇಡಂ' ಎಂದು ಒಬ್ಬ ಹುಡುಗ ಎದ್ದು ನಿಂತ!

'ಇದೇನಪ್ಪಾ, ನಿನ್ನ ಹೆಸರು ಇಷ್ಟು ವಿಚಿತ್ರವಾಗಿದೆಯಲ್ಲ! ಏನು ಇದರರ್ಥ!' ಎಂದು ಕೇಳಿದೆ. ಅವನು ಹಲ್ಲು ಕಿರಿಯುತ್ತಾ, 'ಗೊತ್ತಿಲ್ಲ ಮೇಡಂ' ಎಂದ. ಆಮೇಲೆ ಸ್ಟಾಫ್ ರೂಂನಲ್ಲಿ ಕೇಳಿದರಾಯಿತು ಎಂದುಕೊಂಡು ಸುಮ್ಮನಾದೆ.

ನಂತರ ದಾಖಲಾತಿ ಮಾಡಿಕೊಂಡವರನ್ನು 'ಇದ್ಯಾರು ಮೇಡಂ ಬಾಲ್ ಕೇಶ್ ಅಂತ ಹೆಸರಿಟ್ಟಿರೋ ಪುಣ್ಯಾತ್ಮರು' ಎಂದು ಕೇಳಿ ನಕ್ಕೆ. ಅದಕ್ಕವರು, 'ಅದು ಬಾಲ ಕೇಶವ ಎನ್ನುವ ಹೆಸರಿನ ಮಾಡ್ರನ್ ರೂಪ ಮೇಡಂ. ಹುಡುಗನ ಅಜ್ಜಿ ಬಾಲಕೇಶವ ಎಂದು ನಾಮಕರಣ ಮಾಡಿದ್ದನ್ನು ಅವನಪ್ಪ ಅಮ್ಮ ನವೀಕರಣ ಮಾಡಿ ಬಾಲ್ ಕೇಶ್ ಮಾಡಿದ್ರಂತೆ' ಎಂದಾಗ ಆಶ್ಚರ್ಯವಾಯಿತು. 'ಅದರಲ್ಲೇನು ಮೇಡಂ, ನನ್ನ ಕಸಿನ್ ಒಬ್ಬ ತನ್ನ